# ಅನಿಕೇತನ

# ANIKETANA

**ಡಾ ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ**

**Dr. Manmohan Singh Bengaluru City University**

ಆಗು ನೀ ಅನಿಕೇತನ
BE BOUNDLESS

ಸಂಪುಟ 01 | ಸಂಚಿಕೆ 08 | ಬೆಂಗಳೂರು | June 2026 | ಪುಟ 01


# ಉದ್ಯೋಗ ಮಹಾಮೇಳ–2026: ಉದ್ಯಮ ವಲಯ–ವಿದ್ಯಾರ್ಥಿಗಳಿಂದ ಅತ್ಯುತ್ತಮ ಸ್ಪಂದನೆ




ಉದ್ಯೋಗ ಮಹಾಮೇಳ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿ ಪ್ರೊ.ಎಸ್.ಆರ್. ನಿರಂಜನ, ಕುಲಪತಿ ಪ್ರೊ. ರಮೇಶ್.ಬಿ. ಹಾಗೂ ಇತರೆ ಗಣ್ಯರು

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವತಿಯಿಂದ ಮೇ 25 ರಂದು ಏರ್ಪಡಿಸಲಾಗಿದ್ದ ಉದ್ಯೋಗ ಮಹಾಮೇಳಕ್ಕೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರಾದ ಪ್ರೊ. ಎಸ್. ಆರ್. ನಿರಂಜನ ವಿಧ್ಯುಕ್ತವಾಗಿ ಚಾಲನೆ ನೀಡಿದರು.

ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ನೂತನ ಶೈಕ್ಷಣಿಕ ವಿಭಾಗ ಕಟ್ಟಡದಲ್ಲಿ ಕುಲಪತಿಗಳಾದ ಪ್ರೊ.ಬಿ. ರಮೇಶ್ ರವರ ಅಧ್ಯಕ್ಷತೆಯಲ್ಲಿ ಜರುಗಿದ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಅವರು ಕೌಶಲ್ಯ ಆಧಾರಿತ ಶಿಕ್ಷಣ ತಕ್ಷಣದ ಅಗತ್ಯವಾಗಿದೆ ಎಂದು ಪ್ರತಿಪಾದಿಸಿದರು.

ಪಠ್ಯಕ್ರಮದ ಅಧ್ಯಯನದ ಜೊತೆಗೆ ಸೃಜನಶೀಲತೆ, ವಿಮರ್ಶಾತ್ಮಕ ಚಿಂತನೆ ಮತ್ತು ವ್ಯಕ್ತಿತ್ವ ವಿಕಾಸದ ಮೂಲಕ ಶೈಕ್ಷಣಿಕ ಜೀವನದ ಗುರಿ ಸಾಧನೆಗೆ ಭದ್ರ ಅಡಿಪಾಯ ರೂಪಿಸಿಕೊಳ್ಳುವಂತೆ ಅವರು ವಿದ್ಯಾರ್ಥಿಗಳಿಗೆ ಸಲಹೆಯಿತ್ತರು.

ನಳಂದ, ತಕ್ಷಶಿಲೆ ವಿಶ್ವವಿದ್ಯಾಲಯಗಳ ಶಿಕ್ಷಣ ವ್ಯವಸ್ಥೆ ಹಾಗೂ ಗುರು–ಶಿಷ್ಯ ಪರಂಪರೆಯ ಕು–ರಿತು ಪ್ರಸ್ತಾಪಿಸಿದ ಅವರು ಶಿಕ್ಷಣದ ಗುಣಮಟ್ಟ ಮತ್ತು ಬೋಧನಾ ವಿಧಾನಗಳ ಸುಧಾರಣೆಗೆ ವಿಶೇಷ ಗಮನ ಹರಿಸುವಂತೆ ಸೂಚಿಸಿದರು.

ರಾಜ್ಯದ 13 ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಉದ್ಯಮ ವಲಯ ನಿರ್ದೇಶಿತ ಪದವಿ ಕೋರ್ಸ್‌ಗಳನ್ನು ಪ್ರಾರಂಭಿಸುತ್ತಿರುವುದಾಗಿ ತಿಳಿಸಿದ ಅವರು ಉನ್ನತ ಶಿಕ್ಷಣ ಇಲಾಖೆ ಇತ್ತೀಚೆಗೆ ಹಮ್ಮಿಕೊಂಡಿದ್ದ 'ಕ್ಯಾಂಪಸ್ ಟು ಕೆರಿಯರ್' ಕಾರ್ಯಕ್ರಮ ಹೊಸ ಆಯಾಮವನ್ನು ಒದಗಿಸಿದೆ ಎಂದು ವಿವರಿಸಿದರು.

ವಿದ್ಯಾರ್ಥಿಗಳಿಗೆ ಉದ್ಯೋಗ ಕೌಶಲ್ಯ ತರಬೇತಿ ಮತ್ತು ಮಾರ್ಗದರ್ಶನ ಹಾಗೂ ಉದ್ಯಮ ಸಹಭಾಗಿ–ತ್ವ ಯೋಜನೆಯ ಮೂಲಕ ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ರಾಜ್ಯದ ಇತರೆ ವಿಶ್ವವಿದ್ಯಾಲಯಗಳಿಗೆ ಮಾದರಿಯಾಗಿದೆ ಎಂದು ಅವರು ಶ್ಲಾಘಿಸಿದರು.

ಬೃಹತ್ ಪ್ರಮಾಣದ ಉದ್ಯೋಗ ಮಹಾಮೇಳ ಆಯೋಜಿಸುವ ಮೂಲಕ ವಿದ್ಯಾರ್ಥಿಗಳಿಗೆ ಹೊಸ ಭರವಸೆ ಮೂಡಿಸಿದ ಕುಲಪತಿ ಪ್ರೊ. ರಮೇಶ್.ಬಿ. ಹಾಗೂ ವಿಶ್ವವಿದ್ಯಾನಿಲಯದ ಆಡಳಿತವರ್ಗವನ್ನು ಅವರು ಅಭಿನಂದಿಸಿದರು.

ಕುಲಸಚಿವರಾದ ಎ. ನವೀನ್ ಜೋಸೆಫ್, ಕುಲಸಚಿವ (ಮೌಲ್ಯಮಾಪನ) ಪ್ರೊ.ರಮೇಶ. ಬಿ.ಕುಡೇನಟ್ಟಿ, ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಪ್ರಾದೇಶಿಕ ನಿರ್ದೇಶಕರಾದ ಲಕ್ಷ್ಮಿಪ್ರಸಾದ್. ಕೆ. ಹಾಗೂ ವಿಶ್ವವಿದ್ಯಾನಿಲಯದ ಉದ್ಯೋಗ ತರಬೇತಿ ಮತ್ತು ನಿಯೋಜನೆ ಕೇಂದ್ರದ ನಿರ್ದೇಶಕರಾದ ಪ್ರೊ. ರಿತಿಕಾ ಸಿನ್ಹಾ, ಸಂಯೋಜಕರಾದ ಡಾ. ಎ.ನಬಿ ಹಾಗೂ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

**–ಪ್ರಶಾಂತ್, ಖುಷ್ಬು**
II M A, Dept of MCJ

ಉದ್ಯೋಗ ಮಹಾಮೇಳದಲ್ಲಿ ವಿವಿಧ ವಲಯಗಳಿಗೆ ಸಂಬಂಧಿಸಿದ 70 ಕಂಪನಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಿಂದ ಹಾಗೂ ಇತರೆ ವಿಶ್ವವಿದ್ಯಾಲಯಗಳ ಒಟ್ಟು 3367 ಆಕಾಂಕ್ಷಿಗಳು ತಮ್ಮ ಹೆಸರು ನೋಂದಾಯಿಸಿಕೊಂಡು 2300ಕ್ಕೂ ಹೆಚ್ಚು ಅಭ್ಯರ್ಥಿಗಳು ನೇರ ಸಂದರ್ಶನದಲ್ಲಿ ಪಾಲ್ಗೊಂಡಿದ್ದರು.

ಕ್ವೆಸ್, ಎಥ್ನಸ್, ಎಡುಫ್ಯಾಕ್ಟರಿ, ಮ್ಯಾಜಿಕ್ ಬಸ್ ಮತ್ತು ಎಸ್.ಎಸ್.ಬಿ. ಸಲ್ಯೂಷನ್ಸ್ ಸಂಸ್ಥೆಗಳ ಜಂಟಿ ಸಹಯೋಗದಲ್ಲಿ ಏರ್ಪಡಿಸಲಾಗಿದ್ದ ಈ ಮಹಾಮೇಳದಲ್ಲಿ 587 ಅಭ್ಯರ್ಥಿಗಳು ಉದ್ಯೋಗ ಅರ್ಹತಾ ಅಂತಿಮ ಪಟ್ಟಿಯಲ್ಲಿ ಅವಕಾಶ ಪಡೆದಿದ್ದು ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ.

## ಉದ್ಯೋಗ ವಾಗ್ದಾನ ಪತ್ರಗಳ ವಿತರಣೆ



ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಉದ್ಯೋಗ ತರಬೇತಿ ಮತ್ತು ನಿಯೋಜನೆ ಕೇಂದ್ರದ ವತಿಯಿಂದ ಮೇ 5 ರಂದು 34 ಅರ್ಹ ಅಭ್ಯರ್ಥಿಗಳಿಗೆ ಏಜೈಲ್ ರೋಬೋಸ್ ಕಂಪನಿಯ ಉದ್ಯೋಗ ವಾಗ್ದಾನ ಪತ್ರಗಳನ್ನು ವಿತರಿಸಲಾಯಿತು.

ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಿರ್ದೇಶಕರಾದ ಡಾ.ಟಿ.ಎನ್.ತಾಂಡವಗೌಡ, ಕೌಶಲ್ಯ ಅಭಿವೃದ್ಧಿ ಕೇಂದ್ರದ ನಿರ್ದೇಶಕರಾದ ಪ್ರೊ.ರಿತಿಕಾ ಸಿನ್ಹಾ, ಎಥ್ನಸ್ ಟೆಕ್ನಾಲಜೀಸ್ ಸಿಇಓ ಬದರಿನಾಥ್, ಉದ್ಯೋಗ ತರಬೇತಿ ಮತ್ತು ನಿಯೋಜನೆ ಕೇಂದ್ರದ ಅಧಿಕಾರಿಗಳಾದ ಪ್ರೊ. ನಬಿ.ಎ. ಹಾಗೂ ಹರ್ಷ.ಟಿ ಉಪಸ್ಥಿತರಿದ್ದರು.

**–ಸುಷ್ಮಾ ಕೆ ಶರ್ಮಾ,**
TAPC ಸಹಾಯಕರು

### ಅನ್ನದ ಭಾಷೆಯಾಗಿ ಕನ್ನಡ –ರಾಷ್ಟ್ರೀಯ ವಿಚಾರಸಂಕಿರಣ

# ಕೆಪಿಎಸ್ ಶಾಲೆಗಳ ಪರಿಕಲ್ಪನೆಯ ಮರುಚಿಂತನೆ ಅಗತ್ಯ– ಬರಗೂರು ರಾಮಚಂದ್ರಪ್ಪ

ರಾಜ್ಯ ಸರ್ಕಾರ ಇದೀಗ ಆರಂಭಿಸಿರುವ ಕರ್ನಾಟಕ ಪಬ್ಲಿಕ್ ಸ್ಕೂಲ್ ಪರಿಕಲ್ಪನೆಯ ಪರಿಣಾಮಗಳ ಕು–ರಿತು ಮರುಪರಿಶೀಲನೆ ಅತ್ಯಗತ್ಯವೆಂದು ಪ್ರಗತಿಪರ ಲೇಖಕರಾದ ನಾಡೋಜ ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟಿದ್ದಾರೆ.

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದ ವತಿಯಿಂದ ಸೆಂಟ್ರಲ್ ಕಾಲೇಜಿನಲ್ಲಿ ಮೇ 21 ರಂದು ಏರ್ಪಡಿಸಲಾಗಿದ್ದ 'ಅನ್ನದ ಭಾಷೆಯಾಗಿ ಕನ್ನಡ' ಎಂಬ ವಿಷಯದ ಕುರಿತ ರಾಷ್ಟ್ರೀಯ ವಿಚಾರಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಹೊಸ ಯೋಜನೆಯಿಂದ ಸುತ್ತಮುತ್ತಲಿನ ಸರ್ಕಾರಿ ಶಾಲೆಗಳು ಮುಚ್ಚುವ ಗಂಭೀರ ಬಿಕ್ಕಟ್ಟು ಸೃಷ್ಟಿಯಾಗಬಹುದೆಂದು ಎಚ್ಚರಿಸಿದ ಅವರು ಈ ಬಗ್ಗೆ




ರಾಷ್ಟ್ರೀಯ ವಿಚಾರ ಸಂಕಿರಣವನ್ನು ನಾಡೋಜ ಪ್ರೊ. ಬರಗೂರು ರಾಮಚಂದ್ರಪ್ಪ ಉದ್ಘಾಟಿಸಿದರು.

ಮುಖ್ಯಮಂತ್ರಿಯವರು ತಕ್ಷಣ ಗಮನ ಹರಿಸಬೇಕೆಂದು ಮನವಿ ಮಾಡಿದರು.

ಒಂದೊಮ್ಮೆ ಸರ್ಕಾರದ ಕ್ರಮದಿಂದ ಸರ್ಕಾರಿ ಪ್ರಾಥಮಿಕ ಶಾಲೆಗಳು ಮುಚ್ಚಿದರೆ ಅದು 'ಹತ್ಯೆ' ಯಾಗುವುದು ಅಥವಾ ಅವುಗಳು ತಾವಾಗಿಯೇ ಮುಚ್ಚಿದರೆ 'ಆತ್ಮಹತ್ಯೆ' ಯಾಗುವುದು ಎಂದು ಅವರು ಮಾರ್ಮಿಕವಾಗಿ ಬಣ್ಣಿಸಿದರು.

ಕೆಪಿಎಸ್ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಶಿಕ್ಷಣ ನೀಡುವ ಅಗತ್ಯವಾದರೂ ಏನಿತ್ತೆಂದು ಪ್ರಶ್ನಿಸಿದ ಅವರು ಒಂದೇ ಸೂರಿನಡಿಯಲ್ಲಿ ಅಪಾರ ಅಂತರದ, ವಿಭಿನ್ನ ವಯೋಮಾನದ ವಿದ್ಯಾರ್ಥಿಗಳು ಕಲಿಯುವುದು ಸಂಕೀರ್ಣ ಸವಾಲಾಗಬಹುದೆಂದು ನಿರೂಪಿಸಿದರು.

ಈಗಾಗಲೇ ನಿರ್ಧ–ರಿಸಿರುವಂತೆ ಒಂದನೇ ತರಗತಿಯಿಂದಲೇ ಇಂಗ್ಲೀಷ್ ಭಾಷೆಯನ್ನು ಸಮರ್ಪಕವಾಗಿ ಕಲಿಸುವ ಜೊತೆಗೆ ಎಲ್ಲ ಸರ್ಕಾರಿ ಶಾಲೆಗಳ ಗುಣಮಟ್ಟ ಸುಧಾರಣೆಗೆ ರಾಜ್ಯ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಬರಗೂರು ರಾಮಚಂದ್ರಪ್ಪ ಒತ್ತಾಯಿಸಿದರು.

1995ರ ನಂತರ ಪ್ರಾರಂಭಿಸಲಾದ ಖಾಸಗಿ ಕನ್ನಡ ಶಾಲೆಗಳಿಗೂ ಅನುದಾನ ನೀಡುವಂತೆ ರಾಜ್ಯ ಸರ್ಕಾರವನ್ನು ಆಗ್ರಹಪಡಿಸಿದರು. ಸ್ಥಳೀಯ–ರಿಗೆ ಉದ್ಯೋಗ ಆದ್ಯತೆ ನೀಡುವ ರಾಷ್ಟ್ರೀಯ ನೀತಿ ಜಾ–ರಿಯಾಗಬೇಕೆಂದೂ ಅವರು ಇದೇ ವೇಳೆ ಪ್ರತಿಪಾದಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಪತಿಗಳಾದ ಪ್ರೊ. ರಮೇಶ್.ಬಿ. ಮಾತನಾಡಿ ಆಧುನಿಕ ತಂತ್ರಜ್ಞಾನದ ಸ್ಪರ್ಧಾತ್ಮಕ ಯುಗದ ಅಗತ್ಯಗಳಿಗೆ ಕನ್ನಡ ಭಾಷೆಯ ಬಳಕೆಯನ್ನು ಉನ್ನತೀಕ–ರಿಸಬೇಕಾದ ಅಗತ್ಯವಿದೆ ಎಂದು ತಿಳಿಸಿದರು.

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಪ್ರಭಾರ ಕುಲಪತಿಗಳಾದ ಡಾ.ಕೆ. ವೈ.ನಾರಾಯಣಸ್ವಾಮಿ, ಹಿರಿಯ ಲೇಖಕರಾದ ಡಾ. ರಾಜಪ್ಪ ದಳವಾಯಿ ಮತ್ತು ಡಾ.ಎಚ್. ಎಲ್.ಪುಷ್ಪ ವಿಶೇಷ ಉಪನ್ಯಾಸ ನೀಡಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ಸಮಾರೋಪ ಸಮಾರಂಭದ ಮುಖ್ಯಅತಿಥಿಗಳಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಡಾ.ಎಲ್.ಎನ್. ಮುಕುಂದರಾಜ್ ಭಾಗವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ತಾಂಡವಗೌಡ ಉಪಸ್ಥಿತ–ರಿದ್ದರು.

**ಪೂರ್ವ ಪ್ರಾಥಮಿಕ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳನ್ನು ಕೆ.ಪಿ.ಎಸ್ ಶಾಲೆಯಿಂದ ಬೇರ್ಪಡಿಸಿ ಹಳ್ಳಿಗಳಲ್ಲೇ ಉಳಿಸಬೇಕು. ಈ ಕು–ರಿತು ಸರ್ಕಾರ ಚಿಂತನೆ ನಡೆಸಬೇಕು ಎನ್ನುವುದು ನನ್ನ ಒತ್ತಾಯ.**
**–ಪ್ರೊ. ಬರಗೂರು ರಾಮಚಂದ್ರಪ್ಪ**

ಕನ್ನಡ ಉಪನ್ಯಾಸಕರಾದ ಡಾ. ಎಸ್.ಅಖ್ತರ್ ಪ್ರಾಸ್ತಾವಿಕವಾಗಿ ಮಾತನಾಡಿ ಅತಿಥಿಗಳನ್ನು ಸ್ವಾಗತಿಸಿದರು. ಡಾ.ಮಂಜು.ಸಿ. ಎನ್. ಕಾರ್ಯಕ್ರಮ ನಿರೂಪಿಸಿದರು. ಡಾ. ಚಂದ್ರಾವತಿ ಎಸ್.ಮತ್ತು ಡಾ. ನೇತ್ರಾವತಿ .ಜಿ. ಮತ್ತು ಡಾ. ಚಿದಾನಂದ ಗೋಷ್ಠಿಗಳನ್ನು ನಿರ್ವಹಿಸಿದರು.

**– ಡಾ ಮಹೇಶ್ ಎ. ಆರ್.**
ಉಪನ್ಯಾಸಕರು,ಕನ್ನಡ ವಿಭಾಗ

## ಮಕ್ಕಳ ಹಕ್ಕುಗಳ ರಕ್ಷಣೆ ಹಾಗೂ ಪೋಕ್ಸೋ ಕಾಯ್ದೆ ಜಾಗೃತಿ–ತರಬೇತಿ ಕಾರ್ಯಕ್ರಮ

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಮಾಜ ಕಾರ್ಯ ವಿಭಾಗ, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಪ್ರಕೃತಿ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಮಕ್ಕಳ ಹಕ್ಕುಗಳು ಮತ್ತು ಕಾನೂನುಗಳ ರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರದ ಕುರಿತು ವಿಶೇಷ ತರಬೇತಿ ಶಿಬಿರವನ್ನು ಮೇ 12 ರಂದು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಮಕ್ಕಳ ರಕ್ಷಣಾ ನಿರ್ದೇಶನಾಲಯದ ನಿರ್ದೇಶಕರಾದ ಡಾ.ಸಿ.ವಿ. ಸ್ನೇಹಾರವರು ಪೋಕ್ಸೋ ಕಾಯ್ದೆಯ ಮಹತ್ವದ ಕುರಿತು ವಿವರಿಸಿದರು. ಅತ್ಯಂತ ಪರಿಣಾಮಕಾರಿಯಾದ ಈ ಕಾನೂನಿನ ಕುರಿತು ಸಮಾಜದಲ್ಲಿ ಎಚ್ಚರಿಕೆಯ ಸಂದೇಶ ಬಿತ್ತರಿಸಬೇಕೆಂದು ಅವರು ಸೂಚಿಸಿದರು.

ಬಾಲ್ಯ ವಿವಾಹ, ಬಾಲ ಕಾರ್ಮಿಕ ಪದ್ಧತಿ, ಬಾಲಗರ್ಭಿಣಿಯರ ಸಮಸ್ಯೆ, ಭ್ರೂಣ ಹತ್ಯೆ, ಭಿಕ್ಷಾಟನೆ ಮತ್ತು ವೇಶ್ಯಾವಾಟಿಕೆಗೆ ಮಕ್ಕಳ ದುರ್ಬಳಕೆ ಇತ್ಯಾದಿ ಸಾಮಾಜಿಕ ಪಿಡುಗುಗಳ ಬಗ್ಗೆ ಜನಜಾಗೃತಿ ಮೂಡಿಸುವ ಪ್ರಯತ್ನದಲ್ಲಿ ಕೈಜೋಡಿಸುವಂತೆ ಅವರು ವಿದ್ಯಾರ್ಥಿಗಳಿಗೆ ಮನವಿ ಮಾಡಿದರು. ಕುಟುಂಬವೂ ಸೇರಿದಂತೆ ಸಮಾಜದ ವಿವಿಧ ಹಂತಗಳಲ್ಲಿ ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯ ಹಾಗೂ ಹೆಣ್ಣು ಮಕ್ಕಳ ಲೈಂಗಿಕ ಶೋಷಣೆಯನ್ನು ತಡೆಗಟ್ಟಲು ಯುವ ಸಮೂಹ ಸಕ್ರಿಯವಾಗಿ ನೆರವಾಗಬೇಕೆಂದು ಅವರು ಉತ್ತೇಜಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಪತಿಗಳಾದ ಪ್ರೊ. ರಮೇಶ್.ಬಿ. ಮಾತನಾಡಿ ಕರ್ನಾಟಕದಲ್ಲಿ ಕಳೆದೊಂದು ವರ್ಷದಲ್ಲಿ ಸುಮಾರು 80 ಸಾವಿರ ಬಾಲಗರ್ಭಿಣಿ ಪ್ರಕರಣಗಳು ಪತ್ತೆಯಾಗಿರುವುದು ಆತಂಕದ ವಿಷಯವೆಂದು ತಿಳಿಸಿದರು. ಹದಿಹರೆಯದ ಹೆಣ್ಣುಮಕ್ಕಳನ್ನು ಸಾಮಾಜಿಕ ಮಾಧ್ಯಮಗಳ ಮೂಲಕ ಆಕರ್ಷಿಸಿ ದುರ್ಬಳಕೆ ಮಾಡಿಕೊಳ್ಳುವ ವಂಚಕರ ಜಾಲದ ಬಗ್ಗೆ ಸದಾ ಜಾಗೃತವಾಗಿರುವಂತೆ ಅವರು ವಿದ್ಯಾರ್ಥಿಗಳನ್ನು ಎಚ್ಚರಿಸಿದರು. ಮಕ್ಕಳ ಮೇಲಿನ ದೌರ್ಜನ್ಯದ ಪ್ರಕರಣಗಳನ್ನು ಸಹಾಯವಾಣಿ ಮೂಲಕ ಸಂಬಂಧಪಟ್ಟ ಇಲಾಖೆ ಮತ್ತು ಪೊಲೀಸರ ಗಮನಕ್ಕೆ ತರುವ ಮೂಲಕ ಜವಾಬ್ದಾರಿಯುತ ನಾಗರಿಕರಾಗಿ ವರ್ತಿಸಲು ವಿದ್ಯಾರ್ಥಿಗಳನ್ನು ಅವರು ಪ್ರೇರೇಪಿಸಿದರು.

ಬೆಂಗಳೂರು ನಗರ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಲೀಲಾ ಕಲ್ಲಮ್ಮನವರ್ ಪ್ರಾಸ್ತಾವಿಕ ಭಾಷಣ ಮಾಡಿದರು. ಮಕ್ಕಳ ಕಲ್ಯಾಣ ಸಮಿತಿಯ ನಿಕಟಪೂರ್ವ ಅಧ್ಯಕ್ಷರಾದ ಮೀನಾ ಜೈನ್ ಮತ್ತು ಎನ್ ಪೋಲ್ಡ್ ಸಂಸ್ಥೆಯ ನಿರ್ದೇಶಕರಾದ ಖುಷಿ ಕುಶಾಲಪ್ಪ ವಿಶೇಷ ಉಪನ್ಯಾಸ ನೀಡಿದರು.

ಸಮಾಜ ಕಾರ್ಯ ವಿಭಾಗದ ಮುಖ್ಯಸ್ಥರಾದ ಪ್ರೊ. ರಿತಿಕಾ ಸಿನ್ಹಾ ಉಪಸ್ಥಿತರಿದ್ದರು. ಉಪನ್ಯಾಸಕರಾದ ವಾಣಿಶ್ರೀ ಎಂ. ಕಾರ್ಯಕ್ರಮ ನಿರೂಪಿಸಿದರು. ಡಾ. ವೆಂಕಟೇಶಮೂರ್ತಿ ಸ್ವಾಗತಿಸಿದರು. ಎಂ.ವೀರಪ್ಪ ವಂದಿಸಿದರು. ಮಹೇಂದ್ರ ಎಂ. ಪ್ರತಿಜ್ಞಾವಿಧಿ ಬೋಧಿಸಿದರು.

**–ಪೂಜಶ್ರೀ, MCJ ದ್ವಿತೀಯ**


ಮಕ್ಕಳ ಹಕ್ಕುಗಳ ರಕ್ಷಣೆ ತರಬೇತಿ ಶಿಬಿರ ಉದ್ಘಾಟಿಸಿದ ಡಾ. ಸಿ.ವಿ. ಸ್ನೇಹಾ ಮತ್ತು ಪ್ರಮುಖರು

## ಮಾಧ್ಯಮದಲ್ಲಿ ಮಹಿಳೆಯರು, ಶೋಷಿತರಿಗೆ ಹೆಚ್ಚಿನ ಅವಕಾಶ ಅತ್ಯಗತ್ಯ– ಡಿ.ಉಮಾಪತಿ



ಮಾಧ್ಯಮ ಮಂಥನದಲ್ಲಿ ಪತ್ರಕರ್ತ ಡಿ. ಉಮಾಪತಿ ಜೊತೆ ಗಣ್ಯರು ಮತ್ತು ವಿದ್ಯಾರ್ಥಿಗಳು.

ಮುಖ್ಯ ವಾಹಿನಿ ಮಾಧ್ಯಮದಲ್ಲಿ ಮಹಿಳೆಯರು, ತಳ ಸಮುದಾಯ ಹಾಗೂ ಅಲ್ಪಸಂಖ್ಯಾತರಿಗೆ ಅತ್ಯಲ್ಪ ಪ್ರಾತಿನಿಧ್ಯವಿದ್ದು ಸಮಾಜದ ಸಮಗ್ರ ಜನಾಭಿಪ್ರಾಯ ಅಭಿವ್ಯಕ್ತಿಗೆ ಇದರ ಪ್ರಮಾಣವನ್ನು ಹೆಚ್ಚಿಸುವ ಅಗತ್ಯವಿದೆ ಎಂದು ಹಿರಿಯ ಪತ್ರಕರ್ತರಾದ ಡಿ.ಉಮಾಪತಿ ಪ್ರತಿಪಾದಿಸಿದ್ದಾರೆ.

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಂವಹನ ವಿಭಾಗಗಳ ಸಹಯೋಗದಲ್ಲಿ ಬದುಕು ಸೆಂಟರ್ ಫಾರ್ ಲೈವ್ಲಿಹುಡ್ ಸಂಸ್ಥೆ ಆಯೋಜಿಸಿದ್ದ 'ಮಾಧ್ಯಮ ಮಂಥನ' ಸಂವಾದ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿದ್ದರು.

ನ್ಯೂಸ್ ಲಾಂಡ್ರಿ ಸಮೀಕ್ಷಾ ತಂಡ ನಡೆಸಿದ ಅಧ್ಯಯನ ವರದಿಯನ್ನು ಉಲ್ಲೇಖಿಸಿ ಮಾತನಾಡಿದ ಅವರು ಒಟ್ಟಾರೆ ಶೇ. 87 ರಷ್ಟು ಪ್ರಮುಖ ಹುದ್ದೆಗಳು ಪುರುಷರ ಪಾಲಾಗಿವೆ ಹಾಗೂ ನಾಯಕತ್ವ ಸ್ಥಾನಗಳಲ್ಲಿ ಓಬಿಸಿ ಮತ್ತು ಅಲ್ಪಸಂಖ್ಯಾತರ ಪ್ರಾತಿನಿಧ್ಯ ಕೇವಲ ಶೇ.12 ರಷ್ಟಿದ್ದು ಪರಿಶಿಷ್ಟರ ಪ್ರಮಾಣ ಬಹುತೇಕ ಶೂನ್ಯವಾಗಿದೆ ಎಂದು ಅವರು ವಿವರಿಸಿದರು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಮುದ್ರಣ ಮಾಧ್ಯಮ ಸಂಕುಚಿತಗೊಳ್ಳುತ್ತಿದ್ದು ಡಿಜಿಟಲ್ ವೇದಿಕೆಗಳಲ್ಲಿ ಹೊಸ ಅವಕಾಶಗಳು ತೆರೆದುಕೊಂಡಿವೆ, ಹೀಗಾಗಿ ಪತ್ರಿಕೋದ್ಯಮ ವಿದ್ಯಾರ್ಥಿಗಳು ಭಾಷಾ ಪರಿಣತಿ ಮತ್ತು ತಂತ್ರಜ್ಞಾನ ಕೌಶಲ್ಯ ಬೆಳೆಸಿಕೊಳ್ಳುವ ಅಗತ್ಯವಿದೆ ಎಂದು ಅವರು ಸಲಹೆಯಿತ್ತರು.

ಪತ್ರಿಕೆಗಳು ಮತ್ತು ಪುಸ್ತಕಗಳನ್ನು ಓದುವ ಹವ್ಯಾಸ ರೂಢಿಸಿಕೊಂಡು ವಿಮರ್ಶಾತ್ಮಕ ಮನೋಭಾವ ಬೆಳೆಸಿಕೊಳ್ಳುವ ಮೂಲಕ ಜ್ಞಾನದ ಕ್ಷಿತಿಜವನ್ನು ವಿಸ್ತರಿಸಿಕೊಳ್ಳುವಂತೆ ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮಹಿಳಾ ಪತ್ರಕರ್ತರು ಎದುರಿಸುತ್ತಿರುವ ಸವಾಲುಗಳ ಬಗ್ಗೆ ವಿಶ್ಲೇಷಿಸಿದ ಡಾ. ಮಂಜುಶ್ರೀ ಕಡಕೋಳರವರು ಮಾಧ್ಯಮ ರಂಗ ಪ್ರವೇಶಿಸಲು ಕಠಿಣ ಪರಿಶ್ರಮ ಮತ್ತು ದೃಢ ಸಂಕಲ್ಪದ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ದೇವದಾಸಿಯರ ಸಮಸ್ಯೆಗಳ ಕುರಿತ ತಮ್ಮ ವರದಿಗಳಿಂದ ಉತ್ತಮ ಸಾಮಾಜಿಕ ಪರಿಣಾಮ ಬೀರಲು ಸಾಧ್ಯವಾಯಿತೆಂದು ಅವರು ತಿಳಿಸಿದರು. ಸದ್ಯದ ಸನ್ನಿವೇಶದಲ್ಲಿ ಸುಳ್ಳು ಸುದ್ದಿಗಳ ಜಾಲದ ಬಗ್ಗೆ ಮಾಧ್ಯಮ ವಿಶೇಷ ಎಚ್ಚರಿಕೆ ವಹಿಸಬೇಕಾಗಿದೆ ಎಂದರು.

ಕುಲಸಚಿವರಾದ ಎ. ನವೀನ್ ಜೋಸೆಫ್ ಸಂವಾದ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕುಲಪತಿಗಳಾದ ಪ್ರೊ. ರಮೇಶ್.ಬಿ. ಅಧ್ಯಕ್ಷತೆ ವಹಿಸಿದ್ದರು. ಉಭಯ ವಿಶ್ವವಿದ್ಯಾಲಯಗಳ ಸಂವಹನ ವಿಭಾಗ ಮುಖ್ಯಸ್ಥರಾದ ಡಾ.ಟಿ. ಎನ್. ತಾಂಡವಗೌಡ ಮತ್ತು ಡಾ.ಎಸ್.ವೈ. ಸೋಮಶೇಖರ್ ಹಾಗೂ ಬದುಕು ಸಂಸ್ಥೆಯ ದಯಾನಂದ ಉಪಸ್ಥಿತರಿದ್ದರು. ಡಾ.ಮುರಳಿ ಮೋಹನ್ ಕಾಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಂಸಿಜೆ ವಿದ್ಯಾರ್ಥಿ ಮೋಹನ್ ಕಾರ್ಯಕ್ರಮ ನಿರೂಪಿಸಿದರು.

# National-Level Workshop on English Language Teaching

The Department of Studies and Research in English, Dr. Manmohan Singh Bengaluru City University, in collaboration with the Regional Institute of English South India (RIESI), Bengaluru, organised a two-day workshop titled " Advanced Methodologies in Teaching and Material Design for ELT" on 29th and 30th May 2026 at the University's New Academic Block.

The workshop was inaugurated by Prof. Ramesh B, Hon'ble Vice Chancellor, who emphasised the need for innovative, learner-centred pedagogies in English language education. In his address, he highlighted the importance of equipping teachers with contemporary tools and methodologies to meet the evolving demands of higher education.

The Chief Guest, Prof. N. S. Gundur, Senior Professor and Chairman, Department of English, Tumkur University, delivered the keynote address, offering deep insights into the intersections of language, culture, and pedagogy. He stressed the need for contextualised material design and reflective teaching practices in ELT.

Dr. Ravinarayan Chakrakodi, Academic Head of RIESI, played a pivotal role in coordinating the resource persons and sessions. Experts from RIESI conducted intensive sessions on reading pedagogy, grammar through inductive approaches, spoken English development, and principles of material production.

In his context-setting remarks, Dr. Thandava Gowda T N, Chairperson of the Department, underscored the shift from traditional teacher-centric models to dynamic, interactive, and technology-integrated classrooms.

He noted that English teachers today are not merely instructors but designers of learning experiences and facilitators of critical thinking.

The workshop witnessed active participation from faculty members, research scholars, and postgraduate students from various affiliated colleges. Participants engaged in hands-on activities, collaborative tasks, and reflective discussions aimed at enhancing classroom practices and developing locally relevant ELT materials.

Faculty Padmaja compered the program, Dr.Ankur Betageri welcomed the guests and Dr.Chandana proposed the vote of thanks.

**- Yadhushree,** Faculty


Vice Chancellor Prof. Ramesh B honouring Dr N S Gundur,Dr. Ravi Narayan with Dr. Thangavagowda T N

# Farewell to Prof. V R Devaraj


**Felicitation to Prof. V R Devaraj by Chemsitry Department**

Dr.MSBCU Organised a heartfelt farewell Programme in honour of Prof. V. R Devraj at Sir C V Raman Hall on 30th May. The event was attended by university officials, faculty members, staff, and students. The programme was graced by Prof Ramesh B Vice Chancellor , Naveen Joseph A Registar ,Vijaylakshmi, M.V finance officer ,and Dr. Ramesh kudenatti Register (Evaluation), Smt. Sudha Devraj, wife of Prof. B R Devraj , was also present as a special guest . During the programme, the dignitaries praised Prof. Devraj for his dedication , leadership ,and valuable contributions to the progress of university.

Faculty members expressed gratitude for his guidance and support . In his address , Prof. Devraj thanked the university community for their co-operation and encouragement.

On 29th May, farewell function was arranged by the Chemistry Department. Vice-Chancellor Prof. Ramesh.B, Former Vice-Chancellors Prof. Lingaraja Gandhi and Prof. N Narasimhamurthy, Senior Professors N. Ramachandra Swamy, B.M. Swamy, H. Hariprasad, Pandurangappa and others honoured and greeted Prof. V.R.Devaraj.

**-Kushboo Kuwar R**
II M A, Dept of MCJ

# State-Level workshop on 'Sociology in the Era of Digital Society'

Dr. Manmohan Singh Bengaluru City University, Department of Studies and Research in Sociology organised two day state-Level workshop on *Sociology in the Era of Digital Society* on 19th and 20th May, 2026. at the Jnana Jyothi Auditorium, Central College campus. Member of the Legislative Council (MLC) Puttanna inaugurated and asserted that there is an urgent need to revamp social science study and research to effectively face the new challenges of the digitalization era. He advised teachers to embrace new changes by sharpening traditional methods of learning and teaching sociology through technological skills."Universities carry the responsibility of creating an educational environment that fosters the sharp intelligence and innovative talent naturally present in today's generation of students," Mr. Puttanna opined. He further explained that along with a radical revision of the humanities curriculum at the higher education level, technology learning should be integrated into it to open up employment opportunities.

Delivering the keynote address, Prof. C. Somashekar, Dean of the Faculty of Arts, Bangalore University, analysed that Artificial Intelligence (AI) and digital technology are having a widespread impact on social relations as well. He noted that updating course content and adopting new teaching methods in line with the needs of modern society has become inevitable, and universities must gear up in this direction. Dr. Lakshmipathi C.G. Professor at Maharani Cluster University, spoke at the event and cautioned that technology is controlling modern society and is leading to the creation of artificial and unnatural social relationships. Presiding over the programme, Vice-Chancellor Prof. Ramesh B. asserted that there is a need to free social sciences and basic sciences from the 'armchair syndrome' (shell of inertia) and revitalise them with a touch of innovation. On this occasion, he also emphasized the need to preserve the fabric of social structure by judiciously using digital technology, which is casting a massive influence on the society especially children. Prof. Ramesh advised the subject should change its approach from conventional method to transdisciplinary method to create demand in the present society. Prof. Nirmala M, Chairperson and Dr. Krishnamurthy G, Academic Council Member were present on the occasion. Prof R Indira, Professor of Eminence and Provost, Social Science & Allied Faculty of MS Ramaiah University of Applied Science delivered the valedictory address and highlighted the immediate need of curriculum restructure as per the need of the society. Prof M Gurulingaiah, Kuvempu University was the Chief Guest. Technical sessions on Theory, Methods and skills in Teaching, Employability and Career Building, Compitative-Examination and Sociology, Recent Trends in Sociology, Use of Artificial intelligence in Teaching Sociology, were held. To boost the reading habits among the students book exhibition was arranged by the Department of Sociology, around 200 exclusive Sociology original and classics text books were displayed. Poster presentation from students of various colleges was held. On the occasion many retired Professors, Pre-University lecturers and Undergraduate faculty were felicitated for their immense service and contribution to the subject.



State level sociology workshop inaugural ceremony - MLC Puttanna, VC Prof. Ramesh, B and others

**- Dr.Savitha B.C.**
Faculty, Sociology Dept.

# Chemotsava-2026

## Students motivated towards learning Basic Sciences

The Department of Chemistry of Dr. Manmohan Singh Bengaluru City University, in association with the Chemical Society and the Association of Central College Chemistry Alumni organized an innovative programme titled "Chemotsava-2026" on 7th May 2026.

Vice Chancellor Prof. Ramesh B. formally inaugurated the colourful science festival, which featured various academic competitions, by unveiling the event banner.

Addressing the large number of enthusiastic students participating in Chemotsava, he encouraged them to develop greater interest in learning basic sciences, which form the foundation of modern technology.


He motivated students to cultivate a scientific and rational outlook and to actively engage in research and innovation so as to contribute meaningfully to the progress of the society and nation.

Retired senior professor Prof. H. Hariprasad, while speaking on the occasion, explained that the Department of Chemistry, established in 1908 at Central College — once known as the Science Campus of the University of Mysore — has made significant contributions to the advancement of science education.

Chairperson of the Department of Chemistry Prof. P.R. Chethana and Professor K. Shivashankar were the principal coordinators of the programme.

A total of 170 students from fifteen colleges affiliated with various universities participated in the competitions.

During the valedictory ceremony held in the evening, prizes and certificates of appreciation were distributed to the winners.


Chemistry department students with Vice Chancellor Prof. Ramesh.B. and other dignitaries at Chemotsava-2026

## Artificial Intelligence Laboratory Planned at Dr.MSBCU


INNOVEX-2026 inaugurated by industry experts and dignitaries

Prof. Ramesh B. Vice-Chancellor of Dr. Manmohan Singh Bengaluru City University, has expressed the intention to establish an Artificial Intelligence Laboratory on the university campus in the near future.

Presiding over the "Innovex-2.0" Tech Fest organized by the Department of Computer Science at Jnanajyothi Auditorium in Central College premises, he also announced that diploma courses in Cyber Security and Bioinformatics would be launched soon.

The Chief Guest, Varada Rajan Krishna and Special Guests Dr. Gnanavel Mutharasu, Pavan Kumar, and Dr. B.R. Supreeth addressed the students and motivated them to cultivate an exploratory and creative mindset.

They advised students not to limit education merely to obtaining degrees, but to transform classrooms into laboratories for technical skill training. They also encouraged students to gain the experience necessary for launching startup ventures.

Prof. Medha Itagi Huilgol, Chairperson of the Department delivered introductory remarks and explained the purpose of the tech fest. Faculty members Nikhitha S. compered the program. Kamakshi Katti welcomed the gathering, and Sushmitha R.S. proposed vote of thanks.

As part of the two-day "Innovex-2.0" Tech Fest, various events such as Web Designing, Coding and Debugging, Hackathon, Quiz, Debate, Elocution, Short Video- making, Start-up pitch, Gaming, and Prompt War were organized for students.

**Hackathon**

A six-hour Hackathon was successfully organized on 4 May 2026. The event attracted more than 130 students from 30 different colleges, providing a dynamic platform for innovation, collaboration, and problem-solving.

Team **Heapify** from Ramaiah Institute of Technology emerged as the winners, while Team **The Sticky Notes** from Cambridge Institute of Technology secured the runners-up position. Prizes and certificates were distributed to the winners at the valedictory function.

**-Dhanush K**, (II MSc CS)

## Dialogue on Knowledge, Culture, and Civilization




Author Shashi Ranjan Kumar honoured by Prof Ramesh B & Prof B K Ravi

The Department of Mass Communication and Journalism of Dr. Manmohan Singh Bengaluru City University, in collaboration with Bangalore University, organised an academic dialogue with Shashi Ranjan Kumar on his recent book, *The Decline of the Hindu Civilization: Lessons from the Past* on 24th May 2026.

Prof. B. K. Ravi, Vice Chancellor of Bengaluru North University who attended as the chief guest, while the event was presided over by B. Ramesh, Vice Chancellor, Dr.MSBCU. Prof B. Shailashree, Chairperson of Department of Journalism and Mass Communication, BU, Dr. Thandav Gowda T N, Chairperson, Department of Journalism and Mass Communication Dr.MSBCU were present.

Introducing the book, Prof. B. K. Ravi observed that the work goes beyond conventional historical writing and reflects on the gradual decline of intellectual brilliance and spiritual depth in society.

He emphasised that universities today play a crucial role in sustaining traditions of enquiry, dialogue, and plurality. Addressing the gathering, Shashi Ranjan Kumar highlighted several themes discussed in the book, including the history of zero, Euclid's axiomatic methods, and the role of Sanskrit as a cosmopolitan language.

During the interaction session, Prof. Thandav Gowda remarked that decolonisation of the mind is essential for understanding the past from an indigenous perspective.

In his presidential remarks, Prof. B. Ramesh stated that the contemporary environment for knowledge creation is increasingly shaped by ideological polarisation, misinformation, and rapid digital technological transformation. In such a scenario, he said, universities have a greater responsibility in fostering ethical communication and critical enquiry.

**- Dr Malini M,**

## ART IN MY VEINS

As a student of arts I've found my place,  
Where colors and words interlace.  
Though judgments come I stand tall and strong,  
For in my passion I truly belong.

They question my choice their doubts arise,  
But I embrace art with open eyes.  
In strokes and verses my heart finds peace,  
Creating beauty that'll never cease.

With every brushstroke I paint my dreams,  
In poetry's rhythm my spirit gleams.  
Though some may scoff and fail to see,  
In art's embrace I feel truly free.

So let them judge their opinions fade,  
For my happiness cannot be swayed.  
As an arts student I proudly stand,  
In my chosen path I find command.

**-Swathi B , 2nd year , MA in English**

### ಹೆಣ್ಣಿನ ಬವಣೆ

ಮಾತೆಯಾಗಿ ಮಡದಿಯಾಗಿ  
ಹೆಣ್ಣನು ಬಯಸುವ ನೀವು  
ಹೆಣ್ಣು ಮಗಳು ಹುಟ್ಟಿದರೇಕೆ  
ತಾತ್ಸಾರವ ತೋರುವಿರಿ

ವಂಶ ಬೆಳೆಸಲು ಅವಳನು  
ಹೆರಿಗೆ ಯಂತ್ರದಂತೆ ಬಳಸಿ  
ಬಂಜೆಯಾದರೆ ಜರಿಯುವ  
ಮಹಾ ಸ್ವಾರ್ಥಿಗಳು ನೀವು

ನಿಮ್ಮ ಆಸೆ ಕನಸುಗಳಿಗೆ  
ಜೀವ ತುಂಬುವಳು ಹೆಣ್ಣು  
ಅವಳ ಆಸೆಗಳ ಚಿಗುರುವಲ್ಲೇ  
ಚಿವುಟುವ ನಿಷ್ಕರುಣಿಗಳು ನೀವು

ಹೆಣ್ಣು ಒಂಟಿಯಾಗಿದ್ದರೆ ಸಾಕು  
ಮೃಗಗಳಂತೆ ಮೇಲೆರುಗುವ  
ನೀವು ಅವಳ ಬದುಕಿನ ಭವಿಷ್ಯ  
ಹೊಸಕುವ ಹೀನ ಮನಸ್ಥಿತಿಯವರು

**–ಹೀನಾ ಎಸ್ ಎರಗಟ್ಟಿ, II MA English**


**ಸಂಪಾದಕೀಯ ಮಂಡಳಿ**

**ಡಾ. ಟಿ. ಎನ್. ತಾಂಡವ ಗೌಡ**
ಸಂವಹನ ವಿಭಾಗ ಮುಖ್ಯಸ್ಥರು.
**ಎಸ್. ಆರ್. ಆರಾಧ್ಯ**
ಮಾಧ್ಯಮ ಸಮಾಲೋಚಕರು.
**ಡಾ. ಪ್ರವೀಣ ಡಿ.ಎಸ್.**
**ಡಾ. ಮರಿಸ್ವಾಮಿ.**
**ಡಾ. ತೇಜಸ್ವಿನಿ ದೇವಕುಮಾರ್.**
**ಡಾ. ನಂದೀಶ ಎನ್.**
**ಡಾ. ಶ್ರೀನಿವಾಸ್ ಸಿ.ಎನ್.**
**ಸರ್ವಜಿತ್ ಕುಮಾರ್ ಜೆ.ಎನ್.**
(ಪುಟ ವಿನ್ಯಾಸಕರು)
**ಪುನೀತ್ ಡಿ.**
(ತಾಂತ್ರಿಕ ಸಹಾಯಕರು)

**ಮಾರ್ಗದರ್ಶಕ ಮಂಡಳಿ**

**ಪ್ರೊ. ರಮೇಶ್. ಬಿ**
ಮಾನ್ಯ ಕುಲಪತಿಗಳು.
**ನವೀನ್ ಜೋಸೆಫ್. ಎ**
ಮಾನ್ಯ ಕುಲಸಚಿವರು.
**ಪ್ರೊ.ರಮೇಶ.ಬಿ. ಕುಡೇನಟ್ಟಿ**
ಕುಲಸಚಿವರು–ಮೌಲ್ಯಮಾಪನ.
**ಎಂ.ವಿ. ವಿಜಯಲಕ್ಷ್ಮಿ**
ಮಾನ್ಯ ವಿತ್ತಾಧಿಕಾರಿಗಳು.
**ಪ್ರೊ. ಕೆ.ಆರ್.ಜಲಜಾ**
ಡೀನರು, ವಾಣಿಜ್ಯ ನಿಕಾಯ.
**ಪ್ರೊ. ಜ್ಯೋತಿ ವೆಂಕಟೇಶ್**
ಡೀನರು, ಕಲಾ ನಿಕಾಯ.
**ಪ್ರೊ. ಪಿ. ಆರ್. ಚೇತನ**
ಡೀನರು, ವಿಜ್ಞಾನ ನಿಕಾಯ.

**ವಿದ್ಯಾರ್ಥಿ ಸಂಪಾದಕರು**

ಸಾಗರ್ ಟಿ, ಎಂಸಿಜೆ, ದ್ವಿತೀಯ
ರೂಪ, ಎಂಸಿಜೆ, ಪ್ರಥಮ
ತೇಜಸ್ವಿನಿ, ಎಂಸಿಜೆ, ಪ್ರಥಮ


Visit University's website **www.bcu.ac.in** for regular updates of University activities and also read ANIKETANA. Send Reports/Photos to **E-mail id : aniketana@bcu.ac.in**

# Tribute to Freedom Fighter Dr. H. S. Doreswamy

A civic tribute programme was held in memory of veteran freedom fighter, Gandhian, and social activist Dr. H. S. Doreswamy, to uphold the values for which he stood throughout his life.

The programme was jointly organised by the Dr. H. S. Doreswamy Memorial Trust, the Mahatma Gandhi Study Centre of Dr. Manmohan Singh Bengaluru City University, Karnataka Gandhi Smaraka Nidhi, and Gauri Media Trust at the Jnana Jyothi Auditorium on the Central College campus in Bengaluru.

Inaugurating the event, human rights activist Teesta Setalvad emphasized that access to land and housing is a fundamental right of every citizen. She urged the Karnataka government to take immediate measures to ensure social justice for poor and marginalized communities and to address people's aspirations and concerns without delay.

Delivering the keynote address, Gujarat MLA and social activist Jignesh Mevani said that Dr. Doreswamy's vision of an equitable and democratic society should continue to inspire people's movements across the country.

Academic and social thinker Prof. Nagaragere Ramesh highlighted Dr. Doreswamy's lifelong commitment to people's causes and called upon citizens to strengthen democratic struggles and social movements inspired by his legacy.

In her introductory remarks, Dr. H. S. Doreswamy Memorial Trust President Indira Krishnappa recalled the simplicity, integrity, and selfless public service of Dr. Doreswamy. She noted that despite being offered government benefits and even membership in the Legislative Council, he declined such privileges and chose to continue living modestly in a rented house. She urged the younger generation to work towards realizing his dream of building an enlightened, inclusive, and socially just India.

Among those present were Vice-Chancellor Prof. B. Ramesh, Mahatma Gandhi Study Centre Director Prof. Jyothi Venkatesh, and Finance Officer M. V. Vijayalakshmi.

The programme was compered by farmers' leader Veerasangayya. Several eminent personalities and representatives of people's movements participated in panel discussions and deliberations held as part of the event. These included Nadoja Woody P. Krishna, President of Karnataka Gandhi Smaraka Nidhi; Badagalapura Nagendra of Karnataka Rajya Raitha Sangha; Dr. Siddanagouda Patil, Editor , 'Hosathu' monthly Journal; Ravi Kumar Echalamara of Gauri Media Trust; senior journalist Aditya Bharadwaj of 'The Hindu' Mavali Shankar of Karnataka Dalita Sangharsha Samiti (KDSS),and B T Lalitha Nayak among others.

Speakers observed that Dr. Doreswamy's contributions to the freedom struggle, social justice movements, and democratic causes remain relevant in contemporary times. They resolved to continue efforts to preserve his legacy and ensure that his ideals remain alive.



Tribute to freedom fighter and social thinker Dr. H.S. Doreswamy

## Saalumarada Thimmakka-Eco Feminist



The 'Mother of Greenery' Saalumarada Thimmakka, from Tumkur district of Karnataka. She had not received formal education. She married to Bikkala Chikkayya but they didn't get children even after several years of marriage. After being blamed by society for a long time she decided to plant trees and raise them as their own children. Oppression of women and the exploitation of nature are deeply connected in patriarchal society. If a married woman is not able to give birth to children, she will face exploitation in the patriarchal society. As Leela Dube's 'Seed and Earth' concept explains, using metaphors like seed and earth as comparing 'men as seed' and 'women as earth'.

Because of these reasons they started planting trees as children of their own. Finally, she had more than 8000 children in the form of trees. She proved that motherhood isn't defined by giving birth, but also through nurturing and protecting trees. She became an inspiration for many women who were blamed by society for not having children.

She started state and national environmental protection campaigns and founded a trust named "Saalumarada Thimmakka international foundation" in 2014 to create awareness among the communities about preserving nature. For her environmental contributions she received national citizens award in 1996, Indira Priyadarshini Vriksha Mitra in 1997, Nadoja award from Hampi University in 2010 and she was selected in BBC's 100 most prominent women list in 2016.

**-Gangavva Nirvani, II M.A**

**Printed and Published by The Registrar, Dr Manmohan Singh Bengaluru City University, Jnanajyothi Central College Campus, Ambedkar Veedhi, Bengaluru - 560001**